2007–08ನೇ ಸಾಲಿನ ಆರಾಧನಾ ಯೋಜನೆಯಡಿಯಲ್ಲಿ ರೂ. 22.40 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

2008–09ನೇ ಸಾಲಿನಲ್ಲಿ ಜೀರ್ಣೋದ್ಧಾರ / ನವೀಕರಣ ಉದ್ದೇಶಕ್ಕಾಗಿ ಆಯವ್ಯಯದಲ್ಲಿ ರೂ. 1967.00 ಲಕ್ಷಗಳನ್ನು ಒದಗಿಸಿದೆ.

2008–09ನೇ ಸಾಲಿನ ಆರಾಧನಾ ಯೋಜನೆಯಡಿಯಲ್ಲಿ ರೂ. 880.00 ಲಕ್ಷಗಳನ್ನು ಒದಗಿಸಿದೆ.

ತದನಂತರ 2008–09ನೇ ಸಾಲಿನ ಮುಂಗಡ ಪತ್ರದಲ್ಲಿ ಆರಾಧನಾ ಮತ್ತು ಸಂಬಂಧಿತ ಯೋಜನೆಯಡಿ ಧಾರ್ಮಿಕ ಮತ್ತು ದತ್ತಿ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ರೂ. 29.00 ಕೋಟಿಗಳನ್ನು ಮೀಸಲಿಡಲು ಸರ್ಕಾರವು ನಿರ್ಧರಿಸಿರುತ್ತದೆ.

ಚುಕ್ಕೆರಹಿತ ಪ್ರಶ್ನೆ ಸಂಖ್ಯೆ : (178)328
ಸದಸ್ಯರ ಹೆಸರು : ಶ್ರೀ ಸಂಪಂಗಿ.ಎನ್ (ಬಾಗೇಪಲ್ಲಿ)
: (ಶ್ರೀ ಶೋಭಾ ಕರಂದ್ಲಾಜೆ)

ಅ ಗುಡಿಬಂಡೆ ತಾಲ್ಲೂಕಿನಲ್ಲಿ ಶುದ್ಧ ಕುಡಿಯುವ ನೀರಿನ ಕೊರತೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಪರಿಣಾಮವಾಗಿ ರೈತರು/ನಾಗರಿಕರು ಫ್ಲೋರೈಡ್ ಅಂಶ ಹೊಂದಿರುವ ನೀರನ್ನು ಕುಡಿದು ಕೈಕಾಲುಗಳ ಸ್ವಾಧೀನತೆಯನ್ನು ಕಳೆದುಕೊಳ್ಳುತ್ತಿರುವ ವಿಚಾರ ನಿಜವಲ್ಲವೆ;

ಆ ಹಾಗಿದ್ದಲ್ಲಿ, ಫ್ಲೋರೈಡ್ ಅಂಶ ಹೊಂದಿರುವ ನೀರನ್ನು ಕುಡಿದು ಕೈಕಾಲುಗಳ ಸ್ವಾಧೀನತೆಯನ್ನು ಕಳೆದುಕೊಂಡು ಬಳಲುತ್ತಿರುವ ರೈತರು/ನಾಗರಿಕರ ಸಂಖ್ಯೆ ಎಷ್ಟು;

ಗುಡಿಬಂಡೆ ತಾಲ್ಲೂಕಿನಲ್ಲಿ ಅಧಿಕ ಫ್ಲೋರೈಡ್ ಅಂಶವಿರುವ ನೀರು ಸೇವನೆಯಿಂದ ಡೆಂಟಲ್ ಮತ್ತು ಸ್ಕೆಲೆಟಿಲ್ ಫ್ಲೋರೋಸಿಸ್ ಕಾಯಿಲೆಯಿಂದ ಜನರು ಬಳಲುತ್ತಿರುವುದು ನಿಜ.

ಇ ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕಿನಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಸರ್ಕಾರವು ಒದಗಿಸಿಕೊಡಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಈ ನೀರಿನಲ್ಲಿರುವ ಫ್ಲೋರೈಡ್ ಅಂಶವನ್ನು ಹೋಗಲಾಡಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು;

ಉ ಈ ಭಾಗದ ಜನರಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳ 128 ಗ್ರಾಮಗಳಿಗೆ ಪರಗೋಡು ಜಲಾಶಯದ ನೀರನ್ನು ಶುದ್ಧೀಕರಿಸಿ ಶಾಶ್ವತ ಕುಡಿಯುವ ನೀರಿನ

ವ್ಯವಸ್ಥೆ ಕಲ್ಪಿಸಲು ರೂ.20.30 ಕೋಟಿ ಅಂದಾಜು ಯೋಜನೆಗೆ ಅನುಮೋದನೆ ನೀಡಲಾಗಿದೆ. KUWSDB ಸದರಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ವಂಡಮಾನ್ ಕೆರೆ ಜಲಮೂಲ ಆಧರಿಸಿ ಶುದ್ಧೀಕರಿಸಿದ ನೀರನ್ನು 62 ಸಮಸ್ಯಾತ್ಮಕ ಗ್ರಾಮಗಳಿಗೆ ಪೂರೈಕೆ ಮಾಡಲು ರೂ.9.92ಕೋಟಿ ಅಂದಾಜು ಯೋಜನೆಗೆ ಸಬ್-ಮಿಷನ್ ಕಾರ್ಯಕ್ರಮದಡಿ ಅನುಮೋದನೆ ನೀಡಲಾಗಿದೆ. ಇದಲ್ಲದೆ ಡಾ:ಡಿ.ಎಂ.ನಂಜುಂಡಪ್ಪ ವರದಿ ಆಧಾರಿತ ವಿಶೇಷ ಅಭಿವೃದ್ಧಿ ಯೋಜನೆಯಡಿ ಈ ಭಾಗದ ಇತರೆ 44 ಸಮಸ್ಯಾತ್ಮಕ ಗ್ರಾಮಗಳಿಗೆ ಪರ್ಯಾಯ ಜಲಮೂಲ ಆಧರಿಸಿ ಶಾಶ್ವತ ಯೋಜನೆಗಳನ್ನು ರೂಪಿಸಲು ಕ್ರಮವಹಿಸಲಾಗಿದೆ. ಜೊತೆಗೆ ಮೆ: BAIF ಸಂಸ್ಥೆ ಮುಖೇನ ಬಾಗೇಪಲ್ಲಿ ತಾಲ್ಲೂಕಿನ 15 ಅಧಿಕ ಫ್ಲೋರೈಡ್ ಬಾಧೆಗೊಳಗಾದ ಜನವಸತಿಗಳಿಗೆ ಸಂಬಂಧಿಸಿದಂತೆ ರೂ.3.59 ಕೋಟಿ ಅಂದಾಜಿನ ಪೈಲೆಟ್ ಯೋಜನೆ ಮಂಜೂರಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

ಚುಕ್ಕೆರಹಿತ ಪ್ರಶ್ನೆ ಸಂಖ್ಯೆ : (181)329
ಸದಸ್ಯರ ಹೆಸರು : ಶ್ರೀ ಸಂಪಂಗಿ.ಎನ್ (ಬಾಗೇಪಲ್ಲಿ)
: (ಶ್ರೀ ಶೋಭಾ ಕರಂದ್ಲಾಜೆ)

ಅ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ ರೈತಾಪಿ ವರ್ಗದ ಬಡ ಜನತೆಯು ಕುಡಿಯುವ ನೀರಿನ ಅನುಕೂಲತೆಯ ಸಲುವಾಗಿ ಚಿತ್ರಾವತಿ ಅಣೆಕಟ್ಟನ್ನು ನಿರ್ಮಾಣ ಮಾಡಿದ್ದು ನಿಜವಲ್ಲವೇ;

ಕುಡಿಯುವ ನೀರಿನ ಬಾಬ್ತಿಗಾಗಿ ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಡ್ಯಾಂ ನಿರ್ಮಾಣ ಮಾಡಲಾಗಿದೆ.

ಆ ಈ ಅಣೆಕಟ್ಟಿನಿಂದ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಲಾಗುತ್ತಿದೆ;

ಪರಗೋಡು ಜಲಾಶಯದ ವತಿಯಿಂದ ಬಾಗೇಪಲ್ಲಿ ತಾಲ್ಲೂಕಿನ 75 ಗ್ರಾಮಗಳು ಮತ್ತು ಗುಡಿಬಂಡೆ ತಾಲ್ಲೂಕಿನ 53 ಗ್ರಾಮಗಳು ಕುಡಿಯುವ ನೀರಿನ ಸೌಲಭ್ಯ ಪಡೆಯಲಿವೆ.

ಇ ಈ ಭಾಗದಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಜನರು ಫ್ಲೋರೈಡ್ ಅಂಶದ ನೀರನ್ನು ಕುಡಿದು ಕೈಕಾಲುಗಳು ಸ್ವಾಧೀನತೆಯನ್ನು ಕಳೆದು ಕೊಂಡು ನರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ ಭಾಗದ ಜನ ಅಧಿಕ ಫ್ಲೋರೈಡ್ ಅಂಶವಿರುವ ನೀರು ಸೇವನೆಯಿಂದ ಡೆಂಟಲ್ ಮತ್ತು ಸ್ಕೆಲೆಟನ್ ಫ್ಲೋರೊಸಿಸ್ ಖಾಯಿಲೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.